1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ,

ಅಥಣಿ.

---

ಕ್ರಿಮಿನಲ್ ಮಿಸಲೇನಿಯಸ್ ನಂ:425/2021 ದಿನಾಂಕಃ **12.11.2025**

ಪಿ.ಡಬ್ಲೂ :1

---

:ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು:

* * *

**ಪಾಟೀ ಸವಾಲುಃ** ಎದುರುದಾರರ ಪರ ಶ್ರೀ ಆರ್ ಎಮ್ ಬಿ ವಕೀಲರಿಂದಃ

1. ನಾನು 2ನೇ ವರ್ಷದ ಪಿ ಯು ಸಿ ಮುಗಿಸಿ ಸ್ಟಾಫ ನರ್ಸ ಗೆ ಸಂಬಂಧಿಸಿದ ವಿದ್ಯಾಭ್ಯಾಸ ಮಾಡಿರುತ್ತೇನೆ. 1ನೇ ಎದುರುದಾರನು ನನಗೆ ನನ್ನ ಮನೆತನದಿಂದ ಸಂಬಂಧಿಕನಾಗಿರುತ್ತಾನೆ ಎಂದರೆ ಸರಿ. ನನ್ನ ಹಾಗಾ 1ನೇ ಎದುರುದಾರನ ಮದುವೆಯನ್ನು ಇಬ್ಬರ ಸಮ್ಮತಿಯ ಮೇರೆಗೆ ಮಾಡಲಾಗಿದೆ ಎಂದರೆ ಸರಿ. ನನ್ನ ತಂದೆಯ ಊರು ಅಡಹಳ್ಳಿ ಹಾಗೂ ಎದುರುದಾರನ ಊರು ಕೋಹಳ್ಳಿ ಎಂದರೆ ಸರಿ. 2ನೇ ಎದುರದಾರನು ಶಿಕ್ಷಕನಾಗಿ ಅಥಣಿ ಪಟ್ಟಣದಲ್ಲಿ ಕೆಲಸ ಮಾಡುತ್ತಿರುತ್ತಾನೆ ಹಾಗೂ ಅವರ ಮದುವೆ ಆಗಿರುತ್ತದೆ ಹಾಗೂ ಅವರಿಗೆ ಒಬ್ಬ ಮಗಳು ಇರುತ್ತಾಳೆ. 2ನೇ ಎದುರುದಾರನಿಗೆ ನೌಕರಿ ಸಿಕ್ಕಾಗಿನಿಂದ ಅಥಣಿ ಪಟ್ಟಣದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹಾಗೂ 1ನೇ ಎದುರುದಾರನ ಮದುವೆಯಾದ ಬಳಿಕ ನಾವು ಹಾಗೂ ನನ್ನ ಅತ್ತೆ ಸುಮಿತ್ರಾ ಕೂಡಿಕೊಂಡು ವಾಸ ಮಾಡುತ್ತಿದ್ದೇವು ಎಂದರೆ ಸರಿ. ನನ್ನ ಮದುವೆ ದಿಃ 25.04.2016 ರಂದು ಆಗಿರುತ್ತದೆ ಎಂದರೆ ಸರಿ.

2. ನಮ್ಮ ಮದುವೆಯಾಗುವ ಸಮಯದಲ್ಲಿ 1ನೇ ಎದುರುದಾನಿಗೆ ರೂ. 15,000/- ವರೋಪಚಾರ ಹಾಗೂ ರೂ. 2,00,000/- ಗಳನ್ನು ಖರ್ಚು ಮಾಡಿರುವ ಬಗ್ಗೆ ನನ್ನ ಬಳಿ ದಾಖಲಾತಿಗಳು ಇರುತ್ತವೆ. ಸದರಿ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು 1ನೇ ಎದುರುದಾರನ ಜೊತೆ 1ನೇ ಮಗು ಹೊಟ್ಟೆಲು ಇರುವವರೆಗೆ ಮಾತ್ರ ಸಂಸಾರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು 2ನೇ ಅರ್ಜಿದಾರಳನ್ನು ಜನನ ನೀಡಿದ ಬಳಿಕ ನಾನು 1ನೇ ಎದುರುದಾರನ ಜೊತೆ ಬಾಳುವೆ ಮಾಡಲು ಬಂದಿಲ್ಲ ಎಂದರೆ ಸರಿಯಲ್ಲ. ನನಗೆ ದೈಹಿಕ ಹಾಗೂ ಮಾನಸಿಕವಾಗಿ ಕಿರುಕುಳ

ನೀಡಿರುವ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿಲ್ಲ. 2ನೇ ಅರ್ಜಿದಾರಳ ವೈದ್ಯಕೀಯ ಖರ್ಚಿನ ದಾಖಲಾತಿಗಳನ್ನು ನಾನು ಎಮ್ ಸಿ ಕೇಸಿನಲ್ಲಿ ಹಾಜರು ಮಾಡಿರುತ್ತೇನೆ ಈ ಪ್ರಕರಣದಲ್ಲಿ ಹಾಜರು ಮಾಡಿಲ್ಲ.

3. ನನ್ನ ಅರ್ಜಿಯಲ್ಲಿ ಹಾಗೂ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ರಾಜಿ ಪಂಚಾಯಿತಿ ಆಗುವ ಸಮಯದಲ್ಲಿ ಇದ್ದ ಹಿರಿಯರ ಹೆಸರನ್ನು ಬರೆಸಿರುತ್ತೇನೆ. ನನ್ನನ್ನು 1ನೇ ಎದುರುದಾರ , ಅವರ ಸಹೋದರ ಅವರ ತಾಯಿ ಕೂಡಿಕೊಂಡು ನನ್ನನ್ನು ಕರೆಯಲು ನನ್ನ ತವರು ಮನೆಗೆ ಬಂದಿದ್ದರು ಆಗ ನಾನು 1ನೇ ಎದುರುದಾರನ ತಾಯಿಯ ಹೆಸರಿನಲ್ಲಿ ಇರುವ ಮನೆಯನ್ನು ನನ್ನ ಹೆಸರಿಗೆ ಮಾಡಿದರೆ ಮಾತ್ರ ಬರುತ್ತೇನೆ ಎಂದು ಹೇಳಿದ್ದೆ ಆದ ಕಾರಣ ನನ್ನ ಹೆಸರಿಗೆ ಮನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅರ್ಜಿಯ 2ನೇ ಪುಟದ 3ನೇ ಖಂಡಿಕೆಯಲ್ಲಿ ಕೋಹಳ್ಳಿ ಗ್ರಾಮದ ಜಿ ಪಿ ಸಿ ನಂ. 417/ಬಿ ಮನೆಯು ಪಿರ್ಯಾದುದಾರ ನಂ. 1 ಇವರ ಹೆಸರಿನಲ್ಲಿ ಇರುತ್ತದೆ ಎಂದು ಬರೆಯಲಾಗಿದೆ ಅದು ಸರಿ ಇರುತ್ತದೋ ಇಲ್ಲವೋ ಎಂದರೆ ಸಾಕ್ಷಿಯು ಅದು ಸುಳ್ಳಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಅರ್ಜಯನ್ನು ಬರೆಯಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಕೋಹಳ್ಳಿ ಗ್ರಾಮದ ಜಿ ಪಿ ಸಿ ನಂ. 417/ಬಿ ಮನೆಯು ಇಲ್ಲಿಯವರೆಗೆ ನನ್ನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಮನೆಯನ್ನು ನನ್ನ ಹೆಸರಿಗೆ ಮಾಡಿದರು ಸಹ ನಾನು 1ನೇ ಎದುರುದಾರನ ಜೊತೆಗ ಸಂಸಾರ ಮಾಡಲು ಬಂದಿಲ್ಲ ಎಂದರೆ ಸರಿಯಲ್ಲ.

4. ನಾನು 2017 ರಿಂದ ಗುತ್ತಿಗೆ ಆದಾರದ ಮೇಲೆ ನರ್ಸ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ನರ್ಸ ಆಗಿ ಬೇನಾಡಿ ಗ್ರಾಮದಲ್ಲಿ 2 ವರ್ಷ , ಹಾಗೂ ಕಾಗವಾಡ ಗ್ರಾಮದಲ್ಲಿ 2 ವರ್ಷ ಈಗ ಅಡಹಳ್ಳಿ ಗ್ರಾಮದಲ್ಲಿ ಕೆಲಸ ಮಾಡಿದ್ದೇನೆ. ನಾನು ಬೇನಾಡಿ ಹಾಗೂ ಕಾಗವಾಡ ಗ್ರಾಮದಲ್ಲಿ ಕೆಲಸ ಮಾಡುವಾಗ ನನಗೆ ವಸತಿಗಾಗಿ ಕ್ವಾಟರ್ಸ ನೀಡಿದ್ದರು. ನನಗೆ 2017 ರಲ್ಲಿ ರೂ. 8000/- ಪ್ರತಿ ತಿಂಗಳ ಸಂಬಳ ಇತ್ತು ಈಗ ನನಗೆ ರೂ. 10,000/- ಪ್ರತಿ ತಿಂಗಳ ಸಂಬಳ ಇರುತ್ತದೆ. ನನಗೆ ನನ್ನ ಸಂಬಳದ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಈಗ ನನಗೆ ಅಡಹಳ್ಳಿ ಗ್ರಾಮದಲ್ಲಿ ವಸತಿಗಾಗಿ ಕ್ವಾಟರ್ಸ ನೀಡಿಲ್ಲ. ನನಗೆ ಪ್ರತಿ

ತಿಂಗಳು ರೂ. 15,000/- ಗೌರವ ಧನ ಇರುತ್ತದೆ ಹಾಗೂ ರೂ. 10,000/- ಸಂಬಳ ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. 1ನೇ ಎದುರುದಾರನು ಬಿ ಎಸ್ ಸಿ. ಬಿ.ಎಡ್ ಪದವೀದರನಾಗಿರುತ್ತಾನೆ. 1ನೇ ಎದುರುದಾರನಿಗೆ ಸರ್ಕಾರಿ ನೌಕರಿ ಇರುತ್ತದೆ. 1ನೇ ಎದುರುದಾರನು ಸರ್ಕಾರಿ ನೌಕರಸ್ಥ ಎಂದು ತೋರಿಸಲು ನಾನು ದಾಖಲಾತಿಯನ್ನು ಹಾಜರುಪಡಿಸಿಲ್ಲ, ಮುಂದೆ ಹಾಜರುಪಡಿಸಬಲ್ಲೆ. ದಿಃ 02.01.2020 ರವರೆಗೆ 1ನೇ ಎದುರುದಾರನು ಗೌರವ ಶಿಕ್ಷಕ ಎಂದು ಮೊರಾರ್ಜಿ ದೇಸಾಯಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ನಂತರ ಅವನನ್ನು ಕೆಲಸದಿಂದ ತೆಗೆದಿರುತ್ತಾರೆ ಎಂದರೆ ಸರಿ. ಸದರಿ ದಿನಾಂಕದಿಂದ ಇಲ್ಲಿಯವರೆಗೆ 1ನೇ ಎದುರುದಾರನಿಗೆ ಯಾವುದೇ ನೌಕರಿ ಇಲ್ಲ ಎಂದರೆ ಸರಿಯಲ್ಲ. 1ನೇ ಎದುರುದಾರನು ಪ್ರೌಢಶಾಲೆಯಲ್ಲಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದಾನೆ ಹಾಗೂ ಪ್ರತಿ ತಿಂಗಳ ರೂ. 30,000/- ಸಂಬಳ ಪಡೆಯುತ್ತಿದ್ದಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂರದೆ ಸರಿಯಲ್ಲ. 1ನೇ ಎದುರುದಾರನ ಹೆಸರಿನಲ್ಲಿ ಜಮಖಂಡಿ ತಾಲೂಕಾ ಪೈಕಿ ಟಕೋಡ ಗ್ರಾಮದಲ್ಲಿ ಮೂರು ಎಕರೆ ನೀರಾವರಿ ಜಮೀನು ಇರುವುದಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಎದುರುದಾರನು ಕಬ್ಬು ಬೆಳೆ ಬೆಳೆದಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿಲ್ಲ.

6. 2ನೇ ಎದುರುದಾರನ ವಿರುದ್ಧ ನನ್ನ ತಂಟೆ ತಕರಾರು ಇರುತ್ತದೆ. 2ನೇ ಎದುರುದಾರನ ಸಂಬಳ ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿಲ್ಲ. 2ನೇ ಎದುರುದಾರನು ಸರ್ಕಾರಿ ನೌಕರನಾಗಿರುವುದರಿಂದ ಅವನಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. 2ನೇ ಅರ್ಜಿದಾರಳ ವೈದ್ಯಕೀಯ ಖರ್ಚನ್ನು 1ನೇ ಎದುರುದಾರನು ನೋಡಿಕೊಂಡು ಹೋಗಿರುತ್ತಾನೆ ಎಂದರೆ ಸರಿಯಲ್ಲ. ನಾನು ಕಾಗವಾಡದಲ್ಲಿ ಕೆಲಸ ಮಾಡುತ್ತಿದ್ದಾಗ ನನ್ನ ಮನೆಗೆ ಬಂದಾಗ 1ನೇ ಎದುರುದಾರನನ್ನು ಮನೆಯ ಒಳಗೆ ಕರೆದುಕೊಳ್ಳದೆ ಅವಮಾನ ಮಾಡಿರುತ್ತೇನೆ ಎಂದರೆ ಸರಿಯಲ್ಲ. 2017 ರಿಂದ ಇಲ್ಲಿಯವರೆಗೆ 1ನೇ ಎದುರುದಾರನ ಜೊತೆ ಬಾಳುವೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು 1ನೇ ಎದುರುದಾರನ ಜೊತೆಗೆ

ಬಾಳುವೆ ಮಾಡದ ಕಾರಣ 1ನೇ ಎದುರುದಾರನು ಮಾನ್ಯ ಹಿರಿಯ ಶ್ರೇಣಿ ನ್ಯಾಯಾಧೀಶರ ನ್ಯಾಯಾಲಯ ಅಥಣಿಯಲ್ಲಿ ಎಮ್ ಸಿ ಸಂಖ್ಯೆ 94 /2022 ಸಲ್ಲಿಸಿರುತ್ತಾನೆ ಎಂದರೆ ಸರಿಯಲ್ಲ. ನಾನು ಈ ದಿನವೂ ಸಹ 1ನೇ ಎದುರುದಾರ ಕರೆದರು ಸಹ ನಾನು ಬಾಳುವೆ ಮಾಡಲು ತಯಾರಿಲ್ಲ ಎಂದರೆ ಸರಿಯಲ್ಲ. 1ನೇ ಎದುರುದಾರನು ನಂದೇಶ್ವರ ಗ್ರಾಮದಲ್ಲಿ ನೌಕರಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಜಮೀನಿನ ಉತಾರನಲ್ಲಿ 1ನೇ ಎದುರುದಾರನಿಗೆ ಮಾತ್ರ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. 2ನೇ ಎದುರುದಾರ ಹಾಗೂ ಅತ್ತೆಯ ಪಾಲು ಸದರಿ ಜಮೀನಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ನನಗೆ ರೂ. 15,000/- ಸಂಬಳ ಇರುವುದರಿಂದ ಅಷ್ಟು ಹಣ ನಮಗೆ ಸಾಕಾಗುತ್ತದೆ ಎಂದರೆ ಸರಿಯಲ್ಲ. ನಾನು ಸದೃಡ ಇರುವುದರಿಂದ ಹಾಗೂ 1ನೇ ಎದರುದಾರನಿಗೆ ಯಾವುದೇ ನೌಕರಿ ಇಲ್ಲದ ಕಾರಣ ನಾನು ಅರ್ಜಿಯಲ್ಲಿ ಕೇಳಿರುವ ಪರಿಹಾರಕ್ಕೆ ಅರ್ಹಳಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಮಾರಣಾಂತಿಕ ಕಾಯಿಲೆಗಳು ಇರುವುದಿಲ್ಲ. ನಾನು ಈಗ ಬಾಡಿಗೆ ಮನೆಯಲ್ಲಿ ಇರುತ್ತೇನೆ ಹಾಗೂ ಪ್ರತಿ ತಿಂಗಳ ಬಾಡಿಗೆಯು ರೂ. 5000/- ಇರುತ್ತದೆ ಹಾಗೂ ಅದರ ಸಂಖ್ಯೆ 402 ಇರುತ್ತದೆ . ಬಾಡಿಗೆ ಇರುವ ಬಗ್ಗೆ ನಾನು ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ನನ್ನ ಹಾಗೂ ನನ್ನ ಮಗಳ ಖರ್ಚಿನ ವಿವರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನಗೆ ಎದುರುದಾರರಿಂದ ಜೀವನಾಂಶದ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಎದುರುದಾರರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಅರ್ಜಿಯನ್ನು ಸಲ್ಲಿಸಿ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(2ನೇ ಎದುರುದಾರರ ಪರ ವಕೀಲರು ಹಾಜರಿದ್ದು 1ನೇ ಎದುರುದಾರರ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಮ್.ಎಫ್. ಸಿ. ನ್ಯಾಯಾಲಯ, ಅಥಣಿ.